ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ ಕರಾವಳಿ ಸಮುದ್ರ ಕೊರತಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸುವುದು

387(336) ಶ್ರೀ ಜಯಪ್ರಕಾಶ ಹೆಗ್ಡೆ ಕೆ. (ಬ್ರಹ್ಮಾವರ): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 1999-2000ದ ನಂತರ ರಾಜ್ಯದ ಕರಾವಳಿ ತೀರದ ಸಮುದ್ರ ಕೊರತಕ್ಕೆ ಕೈಗೊಂಡ ಶಾಶ್ವತ ಪರಿಹಾರದ ಕಾರ್ಯಯೋಜನೆಗಳೇನು;

ಆ. ಈವರೆಗೆ ಎಷ್ಟು ಅನುದಾನವನ್ನು ಇದಕ್ಕಾಗಿ ಮೀಸಲಿಡಲಾಗಿದೆ;

ಇ. ಸಮುದ್ರ ಕೊರೆತ ತಪ್ಪಿಸಲು ಎಲ್ಲೆಲ್ಲಿ ಶಾಶ್ವತ ತಡೆಗೋಡೆಗಳನ್ನು ನಿರ್ಮಿಸಲಾಗಿದೆ;ಅದರ ವಿಸ್ತೀರ್ಣ ಎಷ್ಟು; ಇದಕ್ಕಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ;

ಈ. ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಶಾಶ್ವತ ತಡೆಗೋಡೆಯ ವಿಸ್ತೀರ್ಣ ಎಷ್ಟು? ತಗಲಿದ ವೆಚ್ಚ ಎಷ್ಟು?

ಉ. ಬಾಕಿ ಉಳಿದಿರುವ ತಡೆಗೋಡೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು; ಇದಕ್ಕಾಗಿ ಮೀಸಲಿಟ್ಟ ಅನುದಾನವೆಷ್ಟು?

ಶ್ರೀ ವಸಂತ ವಿ.ಸಾಲಿಯಾನ(ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ. ರಾಜ್ಯದ ಕರಾವಳಿ ಸಮುದ್ರ ತೀರದ ಕೊರೆತವನ್ನು ತಡೆಗಟ್ಟಲು ಸಿ.ಡಬ್ಲ್ಯೂಪಿಆರ್‌ಎಸ್ ಪುಣೆ ಹಾಗೂ ಕೆ.ಆರ್.ಇ.ಸಿ. ಸುರತ್ಕಲ್ ಇವರು ನೀಡಿದ ವಿನ್ಯಾಸದಂತೆ ಶಾಶ್ವತ ಕಲ್ಲಿನ ತಡೆಗೋಡೆಯನ್ನು ನಿರ್ಮಿಸಲಾಗುತ್ತಿದೆ. ತೀವ್ರ ಸಮುದ್ರ ಕೊರೆತ ಸಂಭವಿಸುವ ಪ್ರದೇಶಗಳಲ್ಲಿ ತಡೆಗೋಡೆ ನಿರ್ಮಿಸಲು ಕೇಂದ್ರ ಪುರಸ್ಕೃತ ಯೋಜನೆಯಡಿ ರೂ. 11.12 ಕೋಟಿಯ ಪ್ರಸ್ತಾವನೆಯನ್ನು ಹಾಗೂ "ರಾಷ್ಟ್ರೀಯ ಕರಾವಳಿ ತೀರ ಸಂರಕ್ಷಣಾ ಯೋಜನೆಯಡಿ"ರಾಜ್ಯದ 49.875 ಕಿ.ಮೀ. ಉದ್ದಕ್ಕೆ ತಡೆಗೋಡೆ ನಿರ್ಮಿಸಲು ರೂ.135.95 ಕೋಟಿಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಆ. 1999-2000ರಿಂದ 2002-03ನೇ ಸಾಲಿನವರೆಗೆ ಒಟ್ಟು ರೂ. 2507.51 ಲಕ್ಷ ಅನುದಾನ ಮೀಸಲಿಡಲಾಗಿರುತ್ತದೆ.

ಇ. ಇಲ್ಲಿಯವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 8.21 ಕಿ.ಮೀ. ಉದ್ದಕ್ಕೆ ರೂ. 1110.94 ಲಕ್ಷ ವೆಚ್ಚದಲ್ಲಿ ಉಡುಪಿ ಜಿಲ್ಲೆಯಲ್ಲಿ 19.093 ಕಿ.ಮೀ. ಉದ್ದಕ್ಕೆ ರೂ.3126.79 ಲಕ್ಷ ವೆಚ್ಚದಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ 21.380 ಕಿ.ಮೀ. ಉದ್ದಕ್ಕೆ ರೂ. 2183.27 ಲಕ್ಷ ವೆಚ್ಚದಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ.

ಈ. ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2.80 ಕಿ.ಮೀ. ಉದ್ದಕ್ಕೆ ರೂ.542.60 ಲಕ್ಷ ವೆಚ್ಚದಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ.

ಉ. ಬಾಕಿ ಉಳಿದಿರುವ ಬಹುತೇಕ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ. ಅಡ್ಡ ಬೇಂಗ್ರೆಯ ಕಾಮಗಾರಿಯನ್ನು ಜೂನ್-2003ರ ಅಂತ್ಯದೊಳಗೆ ಮುಗಿಸಲಾಗುವುದು. ರೂ. 442.53 ಲಕ್ಷಗಳ ಅನುದಾನವಿರುತ್ತದೆ.